ವೋಕ್ಬೇಡ' ಎಂದು ನುಡಿದಿದ್ದ.

ಅದಕ್ಕವಳು, 'ಇಲ್ಲ ಮಂಜೇಗೌಡ, ಕೂನಾಕ ನೀರೋಕ್ತಿಲ್ಲ ಅಂತ ಕಾಣುತ್ತೆ. ಮನೆ ಸೋರಾಕ ಸುರುವಿಟ್ಕೊಂಡ್ಬೈತಿ. ಅದ್ಕೆ ಮೇಲೋಗಿ ನೋಡ್ಕಂಡ್ ಬತ್ತೀನಿ... ಸಂಚ್ಗೆಂಚೇನಾರ ಸಿಕಾಕೊಂಡಿರ್ಬೋರ್ದು' ಎನ್ನುತ್ತ ಮೇಲೆ ನಡೆದಿದ್ದಳು. ಮಂಜೇಗೌಡ, 'ಉಶಾರು ನಂಜಕ್ಕೊ...' ಎಂದು ನುಡಿದು ಬಾಗಿಲು ಹಾಕಿ ಮಲಗಿಕೊಂಡಿದ್ದ. ಅಲ್ಲಿ ಅವಳು ಎಣಿಸಿದಂತೇನು ಆಗಿರಲಿಲ್ಲ. ಮಳೆ ನೀರು ಸರಾಗವಾಗಿ ಹರಿಯುತ್ತಿತ್ತು. ಮಳೆಯ ರಭಸಕ್ಕೆ ಒಂದಷ್ಟು ಮಣ್ಣು ಕೊಚ್ಚಿಕೊಂಡು ಹೋಗಿದ್ದುದ್ದರಿಂದ ತಾರಸಿಯ ಮಣ್ಣು ಸವಕಲಾಗಿತ್ತು. 'ಎಂತಾ ಗುಡ್ಬುದ್ದಿ ನಂದು. ವೋದ ತಿಂಗ್ಳಾಕೆ ಶಿವಣ್ಣ ತನ್ನ ಮನೇಕೆ ಮಣ್ಣಾಕಿಸ್ದಾಗ ನಾನೂ ಆಕಿಸ್ಬಿಡ್ಬೇಕಿತ್ತು. ನನ್ ಬುದ್ಧಿಯಾವಾಕ್ಲು ಇಂಕೇನ' ಎಂದುಕೊಳ್ಳುತ್ತಾ ಕೆಳಗಿಳಿದ ನಂಜಮ್ಮ ಮತ್ತೆ ತನ್ನ ಮನೆಯೊಳಗಡೆ ಹೋಗುವಷ್ಟರಲ್ಲಿ ಹಾಲಿನ ಗೋಡೆಯ ಮಧ್ಯದ ಭಾಗ ಸಿಡಿದು ನೀರು ನುಗ್ಗತೊಡಗಿತ್ತು. ಪಕ್ಕದ ಪಾಳು ಬಿದ್ದ ಮನೆಯ ಗೋಡೆಗೂ ನಂಜಮ್ಮನ ಮನೆಯ ಗೋಡೆಗೂ ನಡುವೆ ಒಂದು ಸಂದಿಯಿದ್ದು ಅದರಲ್ಲಿ ಕಸ, ಕಡ್ಡಿ, ಪ್ಲಾಸ್ಟಿಕ್, ಮೂಳೆ, ಗಾಜಿನ ಚೂರುಗಳು, ಚಿಂದಿ ಬಟ್ಟೆ, ಹರಿದ ಚಪ್ಪಲಿ, ಪಟದ ಒಣಗಿದ ಹಾರ, ತೋರಣದ ಒಣಗಿದೆಲೆಗಳು, ಊದುಕಡ್ಡಿಯ ಬುಡಗಳು, ಸುರ್ರುಸುರ್ ಬತ್ತಿಯ ಕಂಬಿಗಳು, ಸಿಡಿದ ಪಟಾಕಿಗಳ ಅವಶೇಷಗಳು, ಮಾವಿನ ವಾಟೆ ಹೀಗೆ ಏನೆಲ್ಲವನ್ನು ತುಂಬಿಕೊಂಡು ಐದಡಿಯಷ್ಟು ಎತ್ತರಕ್ಕೆ ಮಣ್ಣಾಗಿ ಬೆಳೆದುಕೊಂಡಿತ್ತು. ಅದೇ ಇಲಿ ಹೆಗ್ಗಣಗಳ ನೆಚ್ಚಿನ ತಾಣವಾಗಿ ಅವು ಎರಡೂ ಕಡೆಯ ಗೋಡೆಗಳನ್ನು ಒಂದಷ್ಟು ಕೊರೆದು ಸುಖದಲ್ಲಿ ಓಡಾಡಿಕೊಂಡಿದ್ದವು. ಹಿತ್ತಲ ಮನೆಯ ಸುಬ್ಬಮ್ಮನು ಒಂದೆರಡು ಬಾರಿ ಮನೆಯ ಸಂದಿಯಲ್ಲಿ ಇಲಿ ಹೆಗ್ಗಣಗಳು ಓಡಾಡುತ್ತಿರುವುದಾಗಿ ತಿಳಿಸಿ ಅವು ಮನೆಯ ಗೋಡೆಯನ್ನೂ ಕೊರೆದಿರುವುದಾಗಿ ಎಚ್ಚರಿಸಿದ್ದಳು. ಹಾಗೆ ಅವಳು ಎಚ್ಚರಿಸುವುದಕ್ಕೆ ಕಾರಣವೂ ಇತ್ತು. ನಂಜಮ್ಮನ ಮನೆ ಹಸಿ ಗೋಡೆಗಳಿಂದ ಕೂಡಿದ್ದು ಇಲಿ ಹೆಗ್ಗಣಗಳು ಸಲೀಸಾಗಿ ಕೊರೆಯಬಹುದಾಗಿತ್ತು. ಸುಬ್ಬಮ್ಮನದು ಅದೇ ಉದ್ದೇಶವನ್ನು ಒಳಗೊಂಡ ಕಾಳಜಿಯಾಗಿತ್ತು. ಅದಕ್ಕೆ ನಂಜಮ್ಮ, 'ಬಿಡು ಸುಬ್ಬಕ್ಕ ನನ್ ಜೊತೇಕೆ ಯಾರವ್ರೆ? ಅವಾರ ಓಡಾಡ್ಕಂಡಿರ್ಲಿ. ಏನ್ ಈ ಮನೇನ ವೊತ್ಕೊಂಡ್ ವೋಕ್ತಾವ ಅವು. ಆಗುತ್ತ ಅವ್ಕೆ. ಇರ್ಲಿ ಬಿಡು ನಂಜೊತೇಕೆ... ನಂಕೂನು ಬಲ್ಮ ಬಂದಂಕಾಗುತ್ತೆ' ಎಂದು ನುಡಿದಿದ್ದಳು. ಈಗ ಅದೇ ಇಲಿ ಹೆಗ್ಗಣಗಳ ದೆಸೆಯಿಂದ ಗೋಡೆ ಸಿಡಿದು ನೀರು ಒಳಗೆ ನುಗ್ಗಿತ್ತು. ಅವಳು ಕೈಲಿದ್ದ ಛತ್ರಿ ಮತ್ತು ಟಾರ್ಚನ್ನು ಬಿಸಾಡಿ ಕೆಳಗಿರುವ ಪಾತ್ರೆಯೊಂದನ್ನು ಸಿಡಿದ ಗೋಡೆಯ ಭಾಗಕ್ಕೆ ಅದುಮಿ ಹಿಡಿದುಕೊಂಡಿದ್ದಳು. ಕೊನೆಗೆ ಏನೋ ಹೊಳೆದು ಮೂಲೆಯಲ್ಲಿದ್ದ ಗೋಣಿ ಚೀಲ ಮತ್ತೊಂದಿಷ್ಟು ಹಳೆಯ ಬಟ್ಟೆಗಳನ್ನು ತಂದು ಗೋಡೆಯಲ್ಲಾಗಿರುವ ಬೊಕ್ಕೆಯೊಳಗೆ ತುರುಕತೊಡಗಿದಳು. ಆಗಲೆ ಸಾಕಷ್ಟು ನೀರು ಹರಿದು ಮನೆಯೆಲ್ಲ ಹರಡಿಕೊಂಡಿತ್ತು. ಗೋಣಿ ಚೀಲ ಮತ್ತು ಬಟ್ಟೆಗಳನ್ನು ತುರುಕಿದರೂ ಒಂದಷ್ಟು ನೀರು ಜಿನುಗುತ್ತಲೆ ಇತ್ತು. ನಂತರ ಅವಳು ಮನೆಯಲ್ಲಿರುವ ನೀರನ್ನು ಬಟ್ಟೆಯೊಂದರಲ್ಲಿ ಹಿಡಿದು ಪಾತ್ರೆಗೆ ಹಿಂಡಿ ಹಿಂಡಿ ಹೊರಗೆ ಹಾಕಿದ್ದಳು. ಮಳೆ ನಿಂತಿತ್ತಾದರೂ ಸಂದಿಯಲ್ಲಿರುವ ನೀರು ಖಾಲಿಯಾಗುವವರೆಗು ಮನೆಯೊಳಗೆ ನೀರು ಬರುತ್ತಲೆ ಇತ್ತು. ಹಾಗಾಗಿ ಅವಳು ಬಹುಪಾಲು ರಾತ್ರಿಯೆಲ್ಲ ಹಾಗೆ ನೀರನ್ನು ಹೊರ ಹಾಕುತ್ತಲೆ ಇದ್ದಳು. ಅದಾದ ಮೇಲೆ ಮಣ್ಣನ್ನೆಲ್ಲ ತೆಗೆದು ಒಂದಷ್ಟು ಸ್ವಚ್ಛಗೊಳಿಸಿದ್ದಳಾದರು ಮುಂಜಾವಿನವರೆಗೂ ತಾರಸಿ